ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಶೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್
ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 05 ॥Udp/1263/2015-17 || R.NO.50495/91 ॥ ತಾರೀಕು : 14–02–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಪರ್ತಗಾಳಿಯಲ್ಲಿ ಶ್ರೀ ವಿದ್ಯಾಧಿರಾಜ ತೀರ್ಥ ಶ್ರೀಪಾದರಿಂದ ಶಿಷ್ಯ ಸ್ವೀಕಾರ

## ಶ್ರೀ ಗೋಕರ್ಣ ಮಠದ ಕಿರಿಯ ಯತಿ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿ





ಪರ್ತಗಾಳಿಯಲ್ಲಿ ಶಾಸ್ತ್ರೋಕ್ತವಾಗಿ ನಡೆದ ಸಂಭ್ರಮದ ಸಮಾರಂಭದಲ್ಲಿ ಉದಯ ಭಟ್ ಶರ್ಮಾ ಎಂಬ ಯುವಕನಿಗೆ ಶಿಷ್ಯ ದೀಕ್ಷೆ ನೀಡಿ ಶ್ರೀ ವಿದ್ಯಾಧೀಶ ತೀರ್ಥ ಎಂದು ನಾಮಕರಣ ಮಾಡುವುದರೊಂದಿಗೆ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀ ವಿದ್ಯಾಧಿರಾಜ ತೀರ್ಥ ಸ್ವಾಮೀಜಿಯವರು ಶಿಷ್ಯ ಸ್ವೀಕಾರ ಮಾಡಿದರು.

ಸುಮಾರು 10 ಸಾವಿರ ಮಂದಿ ಗೌಡಸಾರಸ್ವತ ಸಮಾಜ ಬಾಂಧವರ ಸಮ್ಮುಖದಲ್ಲಿ ನಡೆದ ಈ ಐತಿಹಾಸಿಕ ಧಾರ್ಮಿಕ ಕಾರ್ಯಕ್ರಮ ಶ್ರೀ ಗೋಕರ್ಣ ಮಠದ 24ನೇ ಯತಿಯನ್ನಾಗಿ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿಯವರನ್ನು ಜೈಕಾರ, ಚಪ್ಪಾಳೆ ಮೂಲಕ ಭಕ್ತಾಭಿಮಾನಿಗಳು ಸ್ವೀಕರಿಸಿ ಸ್ವಾಗತಿಸಿದರು.

ಸಾಂಪ್ರದಾಯಿಕ ವಿಧಿವಿಧಾನಗಳು ನಡೆದ ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಗೋಕರ್ಣ ಮಠಾಧೀಶರು ಹಾಗೂ ಕಿರಿಯ ಯತಿ ಆಶೀರ್ವಚನ ಮಾಡಿದರು.

"ಶ್ರೇಷ್ಠ ಪರಂಪರೆಯುಳ್ಳ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಚಟುವಟಿಕೆಯನ್ನು ದೈಹಿಕ ಕ್ಷಮತೆ, ಸಮಸ್ಯೆಯ ಹೊರತಾಗಿಯೂ ನಡೆಸಿಕೊಂಡು ಬಂದಿದ್ದೇವೆ. ಗುರುಗಳ ಇಚ್ಛೆ, ಸಂದೇಶವನ್ನು ಸ್ವೀಕರಿಸಿ ಭಕ್ತಾಭಿಮಾನಿಗಳೂ ಸಹಕರಿಸಿದ್ದಾರೆ. ಮಠದ ಪರಮಪತೆಯನ್ನು ಮುಂದುವರಿಸಿಕೊಂಡು ಹೋಗಲು ಉತ್ತಮ ಕಿರಿಯ ಯತಿಗಳು ಲಭ್ಯವಾಗಿದ್ದಾರೆ. ಧಾರ್ಮಿಕ ಪರಂಪರೆಯನ್ನು ಇನ್ನಷ್ಟು ಉನ್ನತಿ ಕೊಂಡೊಯ್ಯುವ ಸಂಕಲ್ಪ ಎಲ್ಲರೂ ಮಾಡುವಂತಾಗಲಿ ಎಂದು ಶ್ರೀ ವಿದ್ಯಾಧಿರಾಜ ತೀರ್ಥ ಸ್ವಾಮೀಜಿಯವರು ಆಶೀರ್ವದಿಸಿದರು

**ಗುರುಗಳ ಆದೇಶದಂತೆ ನಡೆದುಕೊಳ್ಳುತ್ತೇವೆ :**

ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧಿಪತಿ ಶ್ರೀ ವಿದ್ಯಾಧಿರಾಜ ತೀರ್ಥ ಸ್ವಾಮೀಜಿಯವರ ಶಿಷ್ಯರಾದುದು ನಮ್ಮ ಸೌಭಾಗ್ಯ . ಅವರ ಮಾರ್ಗದರ್ಶನದಲ್ಲಿ ಶ್ರೀ ಮಠದಲ್ಲಿದ್ದ 985 ದಿನಗಳ ಕಾಲ ಅಷ್ಟೇ ವಿವಿಧ ಪಾಠಗಳನ್ನು ಕಲಿತಿದ್ದೇವೆ. ಅವರೊಂದಿಗಿದ್ದ ಪ್ರತೀ ಕ್ಷಣದಲ್ಲೂ ಹೊಸ ಹೊಸ ಮಾರ್ಗದರ್ಶನಗಳು ದೊರೆಯುತ್ತವೆ. 72ರ ಗುರುಗಳು 22ರ ಪ್ರಾಯದ ನಮ್ಮ ಮೇಲೆ ಇಟ್ಟಿರುವ ವಿಶ್ವಾಸವನ್ನು ನಾವು ಶಿರಸಾ ವಹಿಸಿ ನಿರ್ವಹಿಸುತ್ತೇವೆ. ಇನ್ನು ಮುಂದೆ ನಮಗೆ ಅವರೇ ಮಾತಾ, ಪಿತಾ, ಸಖ ಎಲ್ಲವೂ ಆಗಿರುತ್ತಾರೆ. ಮಧ್ವ ಪರಂಪರೆಯನ್ನು, ಶ್ರೀ ಮಠದ ಪರಂಪರೆಯನ್ನು , ಶ್ರೀ ಗುರುಗಳ ಆದೇಶವನ್ನು ಪಾಲಿಸಿಕೊಂಡು ಬಂದು ಶ್ರೀ ಗೋಕರ್ಣ ಮಠದ ಪ್ರತಿಷ್ಠೆಗೆ ತಕ್ಕಂತೆ ಮುನ್ನಡೆಯುತ್ತೇವೆ. ಭಕ್ತವೃಂದ ಈ ಹಿಂದಿನಿಂದಲೂ ಮಠಕ್ಕೆ , ಶ್ರೀಗುರುಗಳ ಮೇಲಿಟ್ಟ ಶ್ರದ್ಧೆ , ಶ್ರೀ ಮಠಕ್ಕೆ ನೀಡಿದ ಬೆಂಬಲ ಮುಂದುವರಿಸಿಕೊಂಡು ಹೋಗಬೇಕೆಂದು ಅಪೇಕ್ಷಿಸುತ್ತೇವೆ ಎಂದು ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಕಿರಿಯ ಸ್ವಾಮೀಜಿಯವರ ಪ್ರಥಮ ಆಶೀರ್ವಚನ ಪ್ರವಚನವನ್ನು ಕೇಳಿದ ಸಾವಿರಾರು ಭಕ್ತಾಭಿಮಾನಿಗಳು ಆನಂದ ತುಂದಿಲರಾಗಿ ಚಪ್ಪಾಳೆ ತಟ್ಟಿ ಜೈಕಾರ ಹಾಕಿದರು. ಶ್ರೀ ಗೋಕರ್ಣ ಮಠಾಧೀಶ ಶ್ರೀ ವಿದ್ಯಾಧಿರಾಜ ತೀರ್ಥರು ಸಂತೃಪ್ತಿ ವ್ಯಕ್ತಪಡಿಸಿದರು.

## ನೇರಂಬಳ್ಳಿಯಲ್ಲಿ ಸಂಭ್ರಮದಲ್ಲಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವ





ಕುಂದಾಪುರ ತಾಲೂಕಿನ ಹಂಗಳೂರು ಗ್ರಾಮದ ನೇರಂಬಳ್ಳಿ ಮಠದಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ದಿ.12 ರಂದು ಆದಿತ್ಯವಾರ ಸಂಭ್ರಮದಿಂದ ನಡೆಯಿತು.

ಅಪಾರ ಸಂಖ್ಯೆಯ ಜನರು ಸೇರಿದ ಈ ಕಾರ್ಯಕ್ರಮದಲ್ಲಿ ತಿರುಪತಿ ದಾಸ ಸಾಹಿತ್ಯ ಪ್ರಾಜೆಕ್ಟ್‌ನ ನಿವೃತ್ತ ವಿಶೇಷಾಧಿಕಾರಿ ಕೆ.ಅಪ್ಪಣ್ಣ ಆಚಾರ್ಯ ಹಾಗೂ ಗುರು ಜಗನ್ನಾಥ ದಾಸ ಮಂಡಳಿ ಅವರ ನೇತ್ರತ್ವದಲ್ಲಿ ಈ ಮಂಗಳ ಮಹೋತ್ಸವ ಶಾಸ್ತ್ರೋಕ್ತವಾಗಿ ಹಾಗೂ ಅದ್ದೂರಿಯಲ್ಲಿ ನಡೆಯಿತು. ಉಡುಪಿ ಶ್ರೀ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಸ್ವಾಮೀಜಿ, ಶ್ರೀ ಸೋದೆಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಮತ್ತು ಭೀಮನಕಟ್ಟೆ ಮಠದ ಕಿರಿಯ ಯತಿ ಶ್ರೀ ರಘುವರೇಂದ್ರ ತೀರ್ಥ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ನೇರಂಬಳ್ಳಿಯ ವೇದಮೂರ್ತಿ ಎಸ್.ಲಕ್ಷ್ಮೀನಾರಾಯಣ ತಂತ್ರಿಗಳು ಹಾಗೂ ಕುಟುಂಬಿಕರು ಈ ಪವಿತ್ರ ಕಾರ್ಯ ನಡೆಸಿಕೊಟ್ಟರು. ವೇಮೂ। ಪ್ರಾಣೇಶ ತಂತ್ರಿ ಹಾಗೂ ಸೌಮ್ಯ ದಂಪತಿಯ ವಿವಾಹ ದಶಮಾನೋತ್ಸವದ ಪ್ರಯುಕ್ತ ಲೋಕಕಲ್ಯಾಣಾರ್ಥವಾಗಿ ಏರ್ಪಡಿಸಿದ ಈ ಪವಿತ್ರ ಕಾರ್ಯದಲ್ಲಿ ನೇರಂಬಳ್ಳಿಯ ಕುಟುಂಬದವರು, ಊರ ಪರವೂರ ಗಣ್ಯರು ಹಾಗೂ ಭಕ್ತಾಭಿಮಾನಿಗಳು ಭಾಗವಹಿಸಿ ಪ್ರಸಾದ ಸ್ವೀಕರಿಸಿ ಕೃತಾರ್ಥರಾದರು.




ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
ವಸಂತ ಬೇಕರಿ
ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.
ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ
ಫೋನ್ : 08254–230503, ಮೊ: 9448171188